



ಬ್ಯಾಂಕಾಕ್‌ನ ಮೃಗಾಲಯದಲ್ಲಿರುವ ಈ ಆಮೆ ಒಮ್ಸಿನ್ ಹೊಟ್ಟೆಯಲ್ಲಿರುವ ನೂರಾರು ನಾಣ್ಯಗಳನ್ನು ಶಸ್ತ್ರಚಿಕಿತ್ಸೆ ಮಾಡಿ ಹೊರತೆಗೆಯಲಾಗಿದೆಯಂತೆ. ತಮ್ಮ ಆರೋಗ್ಯ ಸುಧಾರಿಸಲಿ ಎಂದು ಆಶಿಸಿ ಜನ ಆಮೆಯಿರುವ ಕೊಳಕ್ಕೆ ಎಸೆದ ನಾಣ್ಯಗಳನ್ನು ನುಂಗಿ ಆಮೆಯ ಆರೋಗ್ಯ ಕೆಟ್ಟು ಹೋಯ್ತಂತೆ. ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳ ಹಣ ನುಂಗುವ ರೋಗ ಇದಕ್ಕೆ ಹೇಗೆ ಅಂಟಿತೋ!

ಜಿಮ್‌ನಲ್ಲಿ ಕಸರತ್ತು ಮಾಡಿ ಎಷ್ಟು ಕ್ಯಾಲರಿ ಕರಗಿತು ಎಂದು ಲೆಕ್ಕ ಹಾಕುವ ಮಂದಿ ಇನ್ನು ಮುಂದೆ ಹಾಸಿಗೆಯಲ್ಲಿ ನಡೆಸುವ ಕಸರತ್ತಿನಲ್ಲೂ ಎಷ್ಟು ಕ್ಯಾಲರಿ ಸುಟ್ಟು ಹೋಯಿತು ಎಂದು ಲೆಕ್ಕ ಹಾಕಬಹುದಂತೆ. ಬ್ರಿಟನ್ನಿನ ಸಂಶೋಧಕರೊಬ್ಬರು ಕಂಡುಹಿಡಿದಿರುವ ಐ.ಕಾನ್ ಎಂಬ ಈ ಸ್ಮಾರ್ಟ್ ಕಾಂಡೋಮ್ ಕ್ಯಾಲರಿ ಜೊತೆ ಇನ್ನಿತರ ಖಾಸಗಿ ವಿವರಗಳನ್ನೂ ಕಲೆ ಹಾಕುವುದಂತೆ. ಕೈಗೆ ಫಿಟ್‌ಬಿಟ್ ಕಟ್ಟಿಕೊಂಡಂತೆಯೇ ಇದೂ ಬಹಳ ಸುಲಭ ಎಂದು ಸಂಶೋಧಕರು ಹೇಳಿದ್ದು, ಸೋಮಾರಿಗಳಲ್ಲಿ ಹುಮ್ಮಸ್ಸು ಮೂಡಿಸಿರಬಹುದು.

ಇಂಗ್ಲೆಂಡ್‌ನಲ್ಲಿರುವ ಇದು ಜಗತ್ತಿನ ಅತ್ಯಂತ ಪುಟ್ಟದಾದ ನೈಟ್‌ಕ್ಲಬ್. 6 ಮಂದಿ ಅತಿಥಿಗಳು ಹಾಗೂ ಒಬ್ಬ ಡಿಜೆ ಆರಾಮವಾಗಿ ಕುಳಿತು, ಕುಡಿದು, ನರ್ತಿಸಿ ಸಮಯ ಕಳೆಯಬಹುದಂತೆ. ಕ್ಲಬ್ ಅನ್ನು ಹುಡುಕಿಕೊಂಡು ಹೋಗುವ ಬದಲು ಈ ಸಂಚಾರಿ ನೈಟ್‌ಕ್ಲಬ್ ಕುಡಿಯುವವರನ್ನೇ ಹುಡುಕಿಕೊಂಡು ಹೊರಡುತ್ತದೆ.





ಮಥುರಾದಲ್ಲಿ ಹೋಳಿ ಸಂದರ್ಭದಲ್ಲಿ ಲಾಥ್‌ಮಾರ್ ಎಂಬ ಸಂಪ್ರದಾಯ ಬಹಳ ಜನಪ್ರಿಯವಂತೆ. ಈ ಹಬ್ಬದ ವಿಶೇಷವೆಂದರೆ ಮಹಿಳೆಯರು ಕೋಲು ಹಿಡಿದು ಗಂಡಸರನ್ನು ಬಾರಿಸಬಹುದು. ಈ ಹಬ್ಬ ಆಗಾಗ ನಡೆಯುತ್ತಿದ್ದರೆ ಚೆನ್ನಾಗಿರುತ್ತಿತ್ತು ಎಂದು ಎಷ್ಟು ಮಹಿಳೆಯರು ಮನಸ್ಸಿನಲ್ಲೇ ಮಂಡಿಗೆ ತಿಂದಿದ್ದಾರೋ!



ಮುಂಬಯಿಯ ಈ ಮಹಿಳೆ ಸಿಖ್ ಸಮುದಾಯದ ಪುರುಷರು ಧರಿಸುವ ಟರ್ಬನ್ ಧರಿಸಲು ಶುರು ಮಾಡಿದ್ದಾಳಂತೆ. ಹ್ಯೂಮನ್ಸ್ ಆಫ್ ಮುಂಬಯಿ ಫೇಸ್‌ಬುಕ್‌ನಲ್ಲಿ ಫೋಟೊ ಹಾಕಿಕೊಂಡಿರುವ ಈಕೆ ತನ್ನನ್ನು ದಿಟ್ಟಿಸಿ ನೋಡುವ ಕಣ್ಣುಗಳಿಗೆ ಬೇರೆ ಕೆಲಸ ಇಲ್ಲವೇ ಎಂದು ಟಾಂಗ್ ಕೊಟ್ಟಿದ್ದಾಳಂತೆ.

ಪಿಜ್ಜಾ ಮೇಲೆ ಅನಾನಸ್ ಟಾಪಿಂಗ್ ಇದ್ದರೆ ಹೇಗಿರುತ್ತದೆ? ಈ ಪ್ರಶ್ನೆಯನ್ನು ಐಸ್‌ಲ್ಯಾಂಡ್ ಅಧ್ಯಕ್ಷ ಗುಡ್ನಿಗೆ ಹೈಸ್ಕೂಲ್ ಬಾಲಕನೊಬ್ಬ ಕೇಳಿದ್ದೇ ತಡ, ಈ ಅನಾನಸ್ ಟಾಪಿಂಗ್ ಅನ್ನು ನಿಷೇಧಿಸುವ ಕಾನೂನು ತರುವುದಾಗಿ ಅಧ್ಯಕ್ಷರು ಭರವಸೆ ನೀಡಿಬಿಟ್ಟರಂತೆ. ಈ ಸುದ್ದಿ ಎಲ್ಲಾ ಕಡೆ ಚರ್ಚೆಯಾಗತೊಡಗಿದಾಗ ಗುಡ್ನಿ ತನಗೆ ಅಂತಹ ಅಧಿಕಾರವಿಲ್ಲ ಎಂದು ಸ್ಪಷ್ಟನೆ ನೀಡಬೇಕಾಯ್ತಂತೆ. ಏನೇ ಆದರೂ ರಸವತ್ತಾದ ಕಪ್ಪದ ಡೈರಿ ಚರ್ಚೆಯ ಮುಂದೆ ಅನಾನಸ್ ಪಿಜ್ಜಾ ಚರ್ಚೆ ಸಪ್ಪೆ ಸಪ್ಪೆ.